| | | | |
|---|---|---|---|
| ಕರ್ನಾಟಕ ಸರ್ಕಾರ | | | (ಸಿ.ಆರ್.ಪಿ-67) |
| ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4 | ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ | | |
| | ಸಿ.ಸಿ ನಂ. 1211/2023 | | |
| | | ಸಿ.ಡಬ್ಲ್ಯೂ | 6 |
| | | ಪಿ.ಡಬ್ಲ್ಯೂ | 7 |
| ಸಾಕ್ಷಿದಾರರ ಹೆಸರು | ಬ್ಲೆಸ್ಸಿ ಕೋಂ ಜೆಫಿನ್ ಬ್ರೌಸ್ | | |
| ವಯಸ್ಸು | 35 ವರ್ಷ | | |
| ಉದ್ಯೋಗ | ನರ್ಸ | | |
| ವಾಸಸ್ಥಳ | ಕೇರಳ | | |

**<u>ದಿನಾಂಕಃ- 26.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ-</u> ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1) ದಿಃ- 18.12.2022 ರಂದು ನಾನು ಏರ್ ಪೋರ್ಟಗೆ ಹೋಗಲು ಕಾರಿನಲ್ಲಿ ಹೋಗುತ್ತಿದ್ದೆನು. ಆ ಕಾರನ್ನು ಆರೋಪಿತನು ಚಾಲನೆ ಮಾಡುತ್ತಿದ್ದನು. ಆಗ ಇನ್ನೊಂದು ಕಾರು ಏಕಾಏಕಿ ಬಂದು ನಮ್ಮ ಕಾರಿಗೆ ಅಪಘಾತ ಪಡಿಸಿತ್ತು. ಅಪಘಾತದಿಂದಾಗಿ ನನಗೆ 4 ಕಡೆ ಗಾಯಗಳು ಆಗಿತ್ತು. ಕಾರಿನಲ್ಲಿ ನನ್ನ ಗಂಡ ಮತ್ತು ನನ್ನ ಅತ್ತೆ ಸಹಾ ಇದ್ದರು. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ನನಗೆ ಅಪಘಾತದಿಂದ ರಕ್ತಗಾಯ ಆಗಿದ್ದು ನನ್ನನ್ನು ಚನ್ನಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿಂದ ನನ್ನನ್ನು ಹೆಚ್ಚಿನ ಚಿಕಿತ್ಸೆಗಾಗಿ ಬಿ.ಜಿ.ಎಂ. ಆಸ್ಪತ್ರೆಗೆ ಕಳುಹಿಸಿದ್ದರು.

**ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿದ್ದು, ಕೋರಿಕೆಯ ಮೇರೆಗೆ ಅನುಮತಿ ನೀಡಲಾಗಿದೆ.**

**<u>ಪಾಟೀ ಸವಾಲುಃ-</u> ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1) ಕೆಎ.04.ಎಂ.ಬಿ.4146 ನೇದ್ದರ ಕಾರನ್ನು ಆ ದಿನ ಆರೋಪಿತ ಚಾಲನೆ ಮಾಡುತ್ತಿದ್ದನು ಎಂದರೆ ಸರಿ. ಆರೋಪಿತನು ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ರಸ್ತೆಯ ವಿಭಜಕಕ್ಕೆ ಡಿಕ್ಕಿ ಪಡಿಸಿದ್ದನು ಎಂದರೆ ಸರಿಯಲ್ಲ. ಆತನು ಬೇರೋಂದು ಕಾರಿಗೆ ಆ ದಿನ ಡಿಕ್ಕಿ ಪಡಿಸಿದ್ದನು ಎಂದರೆ ಸಾಕ್ಷಿಯು ಆತನ ತಪ್ಪಿ ನಿಂದ ಅಪಘಾತ ಆಗಿಲ್ಲ ಇನ್ನೊಂದು

ಕಾರು ಬಂದು ತಮಗೆ ಅಪಘಾತ ಆಗಿದ್ದಾಗಿ ನುಡಿಯುತ್ತಾರೆ. ಅಪಘಾತದಿಂದಾಗಿ ನನ್ನ ಅತ್ತೆ ಸ್ಥಳದಲ್ಲೇ ಮೃತಪಟ್ಟಿದ್ದರು ಎಂದರೆ ಸರಿ. ಆರೋಪಿತನ ತಪ್ಪಿ ನಿಂದಲೇ ನನ್ನ ಅತ್ತೆ ಮೃತಪಟ್ಟಿದ್ದಾರೆ ಎಂದರೆ ಸರಿಯಲ್ಲ. ಆರೋಪಿತನು ಕೆಎ.04.ಎಂ.ಬಿ.4146 ನೇದ್ದರ ಕಾರಿಗೆ ಅಪಘಾತ ಪಡಿಸಿದ್ದನು ಎಂದರೆ ಸರಿಯಲ್ಲ. ಆ ದಿನ ಈಗ ನ್ಯಾಯಾಲಯದ ಮುಂದಿರುವ ಆರೋಪಿತನು ವಾಹನವನ್ನು ಚಾಲನೆ ಮಾಡುತ್ತಿದ್ದನು ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

<u>ಪಾಟೀ ಸವಾಲುಃ-</u> **ಆರೋಪಿ ಪರ ಶ್ರೀ. ಎಂ.ಕೆ.ಎನ್. ವಕೀಲರಿಂದ.**

1) ಅಪಘಾತವು ಆರೋಪಿತನ ತಪ್ಪಿನಿಂದ ಆಗಿಲ್ಲ ಎಂದರೆ ಸರಿ. ಆರೋಪಿತನು ಆ ದಿನ ವಾಹನವನ್ನು ನಿಧಾನವಾದ ರೀತಿಯಲ್ಲಿ ಚಾಲನೆ ಮಾಡುತ್ತಿದ್ದನು ಎಂದರೆ ಸರಿ. ನಾನು ಕಾರಿನ ಹಿಂಬದಿಯಲ್ಲಿ ನನ್ನ ಮಗುವಿನ ಜೊತೆ ಕುಳಿತಿದ್ದೆನು ಎಂದರೆ ಸರಿ. ನನಗೆ ಆ ವೇಳೆಗೆ ಕಾರಿನ ಮುಂಭಾಗದಲ್ಲಿ ಏನು ಆಗಿತ್ತು ಎಂದು ಗೊತ್ತಾಗಿರುವುದಿಲ್ಲ. ಜೋರಾಗಿ ಶಬ್ದ ಬಂದ ನಂತರ ನಮ್ಮ ವಾಹನಕ್ಕೆ ಬೇರೋಂದು ವಾಹನ ಡಿಕ್ಕಿ ಪಡಿಸಿದ್ದಾಗಿ ನನಗೆ ಗೊತ್ತಾಯಿತು.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

**ಓ.ಹೇ.ಕೆ.ಸರಿ ಇದೆ.**

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು**
**ಚನ್ನಪಟ್ಟಣ**